ಶ್ರೀ ಎಂ. ವಿ. ಕೃಷ್ಣಪ್ಪ.—ಎಸ್ಟಿಮೇಟು ಇತ್ಯಾದಿಗಳೆಲ್ಲ ಬಂದಿವೆ. ಅವುಗಳನ್ನು ಪರಿಶೀಲನೆ ಮಾಡಿ ಕೆಲಸವನ್ನು ಆದಷ್ಟು ಬೇಗ ಪ್ರಾರಂಭಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪ್ರತಿಯೊಂದು ಎಸ್ಟಿಮೇಟನ್ನೂ ಹೀಗೆ ರಿವೈಜ್ ಮಾಡುತ್ತ ಹೋದರೆ, ಇದಕ್ಕೆ ಕಾರಣವೇನು, ಇದರಿಂದ ಕೆಲಸಕಾರ್ಯಗಳಿಗೆ ತೊಂದರೆಯಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರತಿಯೊಂದು ಎಸ್ಟಿಮೇಟು ಹಾಗೆ ರಿವೈಜಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಚೀಫ್ ಇಂಜಿನಿಯರೂ ಸೂಪರಿಂಟೆಂಡಿಂಗ್ ಇಂಜಿನಿಯರೂ ಸ್ಥಳಪರಿಶೀಲನೆ ಮಾಡುತ್ತಾರೆ. ಆಗ ಥೇಂಜ್ ಆಫ್ ಅಲೈನ್‌ಮೆಂಟ್ ಇತ್ಯಾದಿಗಳೇನಾದರೂ ಇದ್ದರೆ ಎಸ್ಟಿಮೇಟನ್ನು ಬದಲಾವಣೆ ಮಾಡಬೇಕಾಗುತ್ತದೆ. ಸಾಧ್ಯವಾದಮಟ್ಟಿಗೂ ಈಗ ಈ ಎಸ್ಟಿಮೇಟುಗಳನ್ನು ರಿವೈಜ್ ಮಾಡಕೂಡದು ಎಂದು ಹೇಳಿದ್ದೇವೆ.

ಶ್ರೀ ವಿ. ಎಂ. ದೇವ್.—ಇವುಗಳನ್ನು ಆದಷ್ಟು ಬೇಗ ಮುಗಿಸಲು ಏನು ನಿರ್ದಿಷ್ಟವಾದ ಕಾರ್ಯ ಕ್ರಮಗಳನ್ನು ಹಾಕಿಕೊಂಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜನರಿಗೆ ಬೇಗ ಅನುಕೂಲವಾಗುವಂತೆ ಈ ಕೆಲಸಗಳನ್ನು ತ್ವರಿತ ದಿಂದ ನಡೆಸಬೇಕೆಂದು ಅಧಿಕಾರಿಗಳಿಗೆ ಆದೇಶ ಕೊಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಾಮಾನ್ಯವಾಗಿ ಪಿ. ಡಬ್ಲ್ಯು.ಡಿ. ನಲ್ಲಿ 100 ಕ್ಕೆ 60 ಎಸ್ಟಿಮೇಟುಗಳು ರಿವೈಜಾಗುತ್ತವೆ. ಇದಕ್ಕೆ ಮೂಲಕಾರಣ ಇಲಾಖೆಯವರು ಬೇಗ ಕೆಲಸವನ್ನು ಕೈಗೊಳ್ಳದಿರುವುದೇ ಆಗಿದೆಯಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಆಗದಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ತಿಳಿಸಲಾಗಿದೆ.

ಶ್ರೀ ಗಾಂಜಿ ವೀರಪ್ಪ.—ಯಗಚಿ ನದೀ ನೀರನ್ನು ವಾಣೀವಿಲಾಸ ಸಾಗರಕ್ಕೆ ಡೈವರ್ಟ್ ಮಾಡಿದರೆ ಇನ್ನೂ ಇದರ ಅಚ್ಚುಕಟ್ಟು 25 ಸಾವಿರ ಎಕರೆಗಳಷ್ಟು ಜಾಸ್ತಿಯಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆಂಬ ವಿಚಾರ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಈ ವಿಚಾರದಲ್ಲಿ ಈಗಾಗಲೆ ಇದೇ ಸಭೆಯಲ್ಲಿ ನಮ್ಮ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ನೀಡಿರುವುದರಿಂದ ನಾನೀಗ ಅದಕ್ಕಿಂತ ಹೆಚ್ಚಿಗೇ ಏನೂ ಹೇಳಲಾರೆ.

ಶ್ರೀ ವಿ. ಎಂ. ದೇವ್.—ಈ ಕೆಲಸಗಳನ್ನು ಪೀಸ್‌ವರ್ಕ್ ಸಿಸ್ಟಂಮೇಲೆ ಮಾಡಿದರೆ ಬೇಗ ಮುಗಿಯುತ್ತವೆ. ಹಾಗೆ ಏಕೆ ಮಾಡಬಾರದು ?

ಶ್ರೀ ಆಲೂರು ಹನುಮಂತಪ್ಪ.—ಹಾಗೂ ಮಾಡುತ್ತಿದ್ದೇವೆ. ಆದರೆ ಎಲ್ಲ ಸಂದರ್ಭಗಳಲ್ಲೂ ಹಾಗೇ ಮಾಡಬೇಕೆಂದರೆ ಸಾಧ್ಯವಿಲ್ಲ. ಅದರಲ್ಲೂ ಬಹಳ ತೊಂದರೆಗಳಿವೆ. ಇದಕ್ಕೆಲ್ಲ ಪಿ.ಡಬ್ಲ್ಯು. ಕೋಡು ಎಂದು ಕಾನೂನಿದೆ. ಅದರ ಪ್ರಕಾರ ಮಾಡಬೇಕೆಂದು ಹೇಳಿದ್ದೇವೆ.

Temples belonging to Muzrai Department in Krishnarajpet Taluk.

*Q.—918. Sri N. NANJE GOWDA (Krishnarajpet).—

Will the Government be pleased to state :—

(*a*) the names of temples belonging to the Muzrai Department in Krishnarajpet Taluk, together with their locations ;

(*b*) the amount of fund belonging to each such temples ;

(*c*) whether it has come to their notice that some temples belonging to the Muzrai Department are in a dilapidated condition due to lack of proper maintenance ?

A.—Sri M. V. KRISHNAPPA (Minister for Revenue).—

(*a*) and (*b*) *vide* statment given below.

(*c*) No.

(Sri M. V. Krishnappa)

STATEMENT

Showing the names of temples belonging to the Muzrai Department and in Krishnarajapet Taluk together with their locations.

Sl. No.	Names of Temples	The amount of funds belonging to each temple
	Major Institutions.	
		Rs.
1	Sri Venkataramanaswamy temple, Hemagiri ...	29,353
2	Sri Malleswaraswamy temple, Krishnarajapet ...	1,086
3	Sri Lakshminarayanaswamy temple, Hosaho'alu ...	9,768
4	Sri Gaviranganathaswamy temple, Billenahalli ...	2,227
5	Sri Lakshminarasimhaswamy temple, Akkihebbal ...	11,217
6	Sri Katteparameswariyamma temple, Mandagere ...	7,455
7	Sri Lakshmidevi temple, Voddaragudi ...	1,715
8	Sri Subba Rao's Choultry, Kikkeri ...	...
	Minor Institutions.	
1	Sri Bhyraveswaraswamy temple, Hadanoor ...	1,774
2	Sri Narayana and Gopalaswamy temple, K. R. pet ...	...
3	Sri Konkaneswaraswamy temple, Akkihebbal ...	5,176
4	Sri Keshava and Anjaneyaswamy temple, Mandagere ...	3,504
5	Sri Rameswara and Triyambakeswaraswamy temple, Madapura ...	6,157
6	Sri Veerabhadraswamy temple, Appanahalli ...	878
7	Sri Anjaneyaswamy temple, Kaddhemmige ...	1,563
8	Sri Kenkeramma temple, Madapura ...	1,705
9	Sri Chennigaraya and Anjaneyaswamy temple, Madaura ...	1,954
10	Sri Anjaneyaswamy temple, Billenahally ...	358
11	Sri Anjaneyaswamy temple, Halemadapura ...	975
12	Sri Anjaneyaswamy temple, Hosaholalu ...	80
13	Sri Anjaneyaswamy temple, Bandihole ...	516
14	Sri Anjaneyaswamy temple, Santhebachally ...	586
15	Sri Anjaneyaswamy temple, Modur ...	494
16	Sri Hanumantharayaswamy temple, Hariharapura ...	100
17	Sri Arakeshvaraswamy temple, Chikkalale ...	950
18	Sri Lakshminarayanaswamy temple, Agahalaya ...	986
19	Sri Malleswaraswamy temple, Agahalaya ...	4,538

1	2	3
20	Sri Ramadevaru temple, Doddakyathanahally ...	603
21	Sri Mahalingeswaraswamy temple Santhebachally ...	5,019
22	Sri Bhyrava and Vinayakaswamy temple, Hosaholalu...	1,176
23	Sri Srikanteswaraswamy temple, Bandihole ...	3,583
24	Sri Gopalaswamy temple, Govindanahally ...	483
25	Sri Veerabhadraswamy temple, Govindanahally ...	1,137
26	Sri Lakshmidevi temple, Sindaghatta ...	238
27	Sri Lakshminarayanaswamy temple, Sindagatta ...	2,991
28	Sri Lakshmidevi and Hanumantharayaswamy temple Manikyanahally ...	349
29	Sri Chennabasaveswaraswamy temple, Krishnarajapet...	2,481
30	Sri Shambulingeswaraswamy temple, Lokanahally ...	1,186
31	Sri Someswaraswamy temple, Sasalu ...	5,023
32	Sri Basaveswara Bhyraveswara and Shambudevaru Temple, Bollenahally...	60
33	Sri Anjaneyaswamy temple, Galiganahally ...	362
34	Sri Lakshmidevi temple, Hubbanahally ...	55
35	Sri Veeradhadraswamy temple, Kundcor ...	375
36	Sri Yoganarasimhaswamy temple, Kikkeri ...	86
37	Sri Keshavadevaru temple, Hariharapura ...	2,116
38	Sri Anjaneyaswamy temple, Madapura ...	3,063

ಶ್ರೀ ಎನ್. ನಂಜೇಗೌಡ.—ಪರಿಶಿಷ್ಟದಲ್ಲಿ ಒಂದನೇ ಐಟಂನಲ್ಲಿ ಹೇಳಿರತಕ್ಕ ದೇವಸ್ಥಾನದ ನಿಧಿ 29,353 ರೂಪಾಯಿಗಳು ಎಂದು ತಿಳಿಸಿದೆ. ಈ ಹಿಂದೆ ಯುದ್ಧ ಸಮಯದಲ್ಲಿ ಇದರಿಂದ ತೆಗೆದು ಕೊಂಡಿದ್ದ ಹಣವೂ ಇದರಲ್ಲಿ ಸೇರಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಮೇಜರ್ ಇನ್‌ಸ್ಟಿಟ್ಯೂಷನ್‌ಗಳಿಂದ ಹಣವನ್ನು ತೆಗೆದು ಕೊಂಡು ವಾರ್ ರಿಲೀಫ್ ಫಂಡಿನಲ್ಲಿ ಇಡಲಾಗಿದೆ. ಆ ಬಗ್ಗೆ ವಾರ್‌ಬಾಂಡುಗಳನ್ನು ಕೊಟ್ಟಿದೆ.

ಶ್ರೀ ಎನ್. ನಂಜೇಗೌಡ.—ಪುದುವಟ್ಟು ಮೊಬಲಗು ಎಷ್ಟಿದೆ. ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿವರಗಳು ಈಗ ನನ್ನಲ್ಲಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಮುಜರಾಯಿಗೆ ಸೇರಿರತಕ್ಕ ದೇವಸ್ಥಾನಗಳು ಹೀನಸ್ಥಿತಿಯಲ್ಲಿದ್ದರೆ ಅದಕ್ಕೇನು ಮಾಡುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಒಂದು ಸೆಕ್ಯುಲರ್ ಸ್ಟೇಟು. ನಮ್ಮಲ್ಲಿ ಸಾಕಷ್ಟು ಫಂಡೂ ಸಹಾ ಇಲ್ಲ. ಮುಜರಾಯಿ ದೇವಸ್ಥಾನಗಳ ಒಟ್ಟು ವರಮಾನ 4 ಲಕ್ಷ ರೂಪಾಯಿಗಳು. ಇದರಲ್ಲಿ ತಿರುಪತಿ, ಕಾಶಿ ಮತ್ತು ಚಾಮುಂಡಿಬೆಟ್ಟ ಈ ಮೂರಕ್ಕೇ 3 ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಇನ್ನು ಒಂದು ಲಕ್ಷ ಉಳಿಯುತ್ತೆ. ಅದರಲ್ಲಿ ಸಂದರ್ಭ ನೋಡಿಕೊಂಡು ಒಂದೊಂದು ದೇವಸ್ಥಾನಕ್ಕೆ ಒಂದುಸಾವಿರ ಎರಡುಸಾವಿರ ಹೀಗೆ ಕೊಡುತ್ತಿದ್ದೇವೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಯಾವ ಯಾವ ಮುಜರಾಯಿ ದೇವಾಲಯಗಳ ಫಂಡಿದೆಯೋ ಅಂಥ ಫಂಡಿನಿಂದ ಅವುಗಳ ಜೀರ್ಣೋದ್ಧಾರಕಾರ್ಯವನ್ನು ಏಕೆ ನಡೆಸಬಾರದು.

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಮಹದೇಶ್ವರಬೆಟ್ಟದಲ್ಲಿ ಹಾಗೇ ಮಾಡುತ್ತಿದ್ದೇವೆ. ಅಲ್ಲಿಗೆ ಬರತಕ್ಕ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಕಲ್ಯಾಣಮಂಟಪ, ರೂಮು ಇತ್ಯಾದಿಗಳನ್ನೆಲ್ಲಾ ಮಾಡಿಸುತ್ತಿದ್ದೇವೆ. ಈಗ ಯಾವ ಯಾವ ದೇವಸ್ಥಾನದಲ್ಲಿ ಅದರ ಫಂಡಿದೆಯೋ ಅಲ್ಲಿ ಈ ಕೆಲಸಗಳನ್ನು ಮಾಡಲು ಒಂದು ಬ್ಲೂ ಪ್ರಿಂಟನ್ನು ತಯಾರಿಸುವಂತೆ ಹೇಳಿದ್ದೇವೆ.

ಶ್ರೀ ಎನ್. ನಂಜೇಗೌಡ.—ತರಿಶಿಷ್ಟದಲ್ಲಿ ಕಾಣಿಸಿರತಕ್ಕ ಖಟಂ ನಂಬರ್—9, 11, ಮತ್ತು 38 ಈ ಮೂರು ಒಂದೇ ಆಗಿದ್ದರೂ ಮೂರು ಬೇರೆ ಬೇರೆ ಖಟಂಗಳಾಗಿ ಏಕೆ ತೋರಿಸಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವು ಬೇರೆ ಬೇರೆಯೇ ಇರಬೇಕು, ಅದುದರಿಂದಲೇ ಹಾಗೆ ತೋರಿಸಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ರಾಜ್ಯದಲ್ಲಿರತಕ್ಕ ದೇವರುಗಳು ಗಾಳಿ, ಮಳೆಗೆ ಸಿಕ್ಕಿ ಇಲ್ಲಿ ಇವುಗಳನ್ನು ಕೇಳುವವರೇ ಇಲ್ಲದಿರುವಾಗ ತಿರುಪತಿ, ಕಾಶಿಗೆ ಏಕೆ ಹೋದಿರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವಲ್ಲ, ಹೋಗಿರತಕ್ಕವರು, ನಮ್ಮ ತಾತಂದಿರ ಕಾಲದಿಂದಲೂ ಇದು ನಡೆದುಕೊಂಡು ಬರುತ್ತಿದೆ. ಈ ಹಿಂದೆ ತಿರುಪತಿಯಲ್ಲಿ ಬರಿ ಅನ್ನದಾನಕ್ಕಾಗೇ 40 ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿತ್ತು. ಈಗ ಅದನ್ನು ನಿಲ್ಲಿಸಿದ್ದೇವೆ ಜನರು ಇಳಿದು ಕೊಳ್ಳುವುದಕ್ಕೆ ಕಾಟೇಜ್‌ಗಳೂ, ನಂದಾದೀಪ, ಇತ್ಯಾದಿಗಳಿಗಾಗಿ ಹಣವನ್ನು ಈಗ ಉಪಯೋಗಿಸ ಲಾಗುತ್ತಿದೆ.

ಶ್ರೀ ಎಂ. ಸಿ. ಬಸಪ್ಪ.—ಪ್ರ(೫) ಶ್ನೆಯ ಭಾಗಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಶಿಥಿಲ ವಾಗಿರುವ ದೇವಸ್ಥಾನಗಳ ವಿಷಯಗಳು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ತಾಲ್ಲೂಕಿನಲ್ಲಿರುವ ದೇವಸ್ಥಾನಗಳು ಸಾಧ್ಯವಾದಷ್ಟೂ ಒಳ್ಳೆಯ ಸ್ಥಿತಿಯಲ್ಲಿವೆ, ಎಲ್ಲೆಲ್ಲ ಶಿಥಿಲವಾಗಿವೆಯೋ ಅವುಗಳನ್ನು ಆಯಾ ದೇವಸ್ಥಾನದ ಫಂಡುಗಳಲ್ಲೇ ರಿಪೇರಿ ಮಾಡಲು ಅವಕಾಶವಿದೆ. ಅದರಂತೆ ರೀಪೇರಿಗಳನ್ನು ಮಾಡುತ್ತಾರೆ.

ಶ್ರೀ ಜಿ. ರಾಮೇಗೌಡ.—ದೊಡ್ಡ ದೇವಾಲಯಗಳಿರುವ ಕಡೆ ದನಗಳ ಜಾತ್ರೆಗಳು ಸೇರುವು ದರಿಂದ ಅಲ್ಲಿನ ಸಂಸ್ಥೆಗಳಿಗೆ ಆದಾಯ ಬರುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ದೊಡ್ಡ ದೇವಸ್ಥಾನಗಳು ಇರುವ ಕಡೆ ಕೆಲವು ದನಗಳ ಜಾತ್ರೆ ಗಳೇನೋ ಸೇರುತ್ತವೆ. ತಮಗೆ ಗೊತ್ತಿರುವ ಹಾಗೆ ತಮ್ಮ ತಾಲ್ಲೂಕಿನಲ್ಲೇ ಘಾಟಿ ಸುಬ್ರಹ್ಮಣ್ಯ ಜಾತ್ರೆ ನಡೆಯುತ್ತಿದೆ. ಹಾಗೇ ಈ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಹೇಮಗಿರಿ ದೇವಸ್ಥಾನದ ಹತ್ತಿರ ದೊಡ್ಡ ದನಗಳ ಜಾತ್ರೆ ನಡೆಯುತ್ತಿದೆ. ಅದರ ಮೂಲಕ ಆ ದೇವಸ್ಥಾನಕ್ಕೆ ಹೆಚ್ಚಿನ ಉತ್ಪತ್ತಿಯೂ ಬರಲು ಸಹಾಯವಾಗಿದೆ. ಅಲ್ಲದೆ ಎಷ್ಟೋ ಕಡೆಗಳಲ್ಲಿ ಜಾತ್ರೆಗಳು ನಡೆಯುವಾಗ ಅಲ್ಲಿಗೆ ಬರುವ ಭಕ್ತಾದಿಗಳೇ ಅಲ್ಲಿನ ಉತ್ಸವಾದಿಗಳನ್ನು ನಡೆಸಲು ಕಾರ್ಯಕ್ರಮ ಹಾಕಿಕೊಂಡು ನಡೆಸುತ್ತಿರುತ್ತಾರೆ.

ಶ್ರೀ ಕೆ. ವಿ. ಬೈರೇಗೌಡ.—ಮುಜರಾಯಿ ದೇವಸ್ಥಾನಗಳಿಗೆ ಎಲ್ಲೆಲ್ಲ ಫಂಡುಗಳು ಇವೆಯೋ ಅಂತಹ ದೇವಸ್ಥಾನಗಳು ಶಿಥಿಲವಾದರೆ ಅದನ್ನು ಕೂಡಲೇ ಅಲ್ಲ ರಿಪೇರಿ ಮಾಡಲು ಹಣ ಒದಗಿಸುವಂತೆ ಏಕೆ ಮಾಡಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ —ಅದಕ್ಕಾಗಿಯೇ ಈಗ ಹೊಸ ಆಕ್ಟನ್ನು ತಂದಿದ್ದೇವೆ. ಅದರ ಪ್ರಕಾರ ಇದನ್ನೆಲ್ಲಾ ನೋಡಿಕೊಳ್ಳಲು ಸ್ಪೆಷಲ್ ಸ್ಟಾಫ್ ಎಂದು ಕೊಡುತ್ತೇವೆ. ಈಗ ಮುಜರಾಯಿ ಇಲಾಖೆ ಯನ್ನೂ ರೆವೆನ್ಯೂ ಇಲಾಖೆಯೇ ನೋಡುತ್ತಿರುವುದರಿಂದ ಆಯಾ ತಾಲ್ಲೂಕಿನಲ್ಲಿರುವ ತಹಶೀಲು ದಾರರುಗಳು ಈ ಕೆಲಸಕ್ಕಾಗಿ ಸ್ಪೆಷಲ್ ಅಟೆನ್‌ಷನ್ನು ಕೊಡುವುದಕ್ಕೆ ಆಗುತ್ತಿಲ್ಲ. ಅದಕ್ಕಾಗಿ ಪ್ರತ್ಯೇಕವಾಗಿ ಇನ್ಸ್‌ಪೆಕ್ಟರು ಎನ್ನುವ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದಿದ್ದೇವೆ. ಅಲ್ಲದೆ ದೇವಸ್ಥಾನ ಗಳ ಆದಾಯವೂ ಕಡಿಮೆಯಾಗಿರುವುದರಿಂದ ಇದಕ್ಕಾಗಿ ಹೆಚ್ಚಿನ ಖರ್ಚೂ ಬರುವುದಿಲ್ಲ. ಇದಕ್ಕಾಗಿಯೇ ಒಬ್ಬರು ಅಸಿಸ್ಟೆಂಟು ಕಮಿಷನರವರನ್ನೂ ನೇಮಕ ಮಾಡಿದರೆ ಇವನ್ನೆಲ್ಲ ನೋಡಿಕೊಳ್ಳಲು ಅನುಕೂಲ ವಾಗುತ್ತದೆ. ಅದಕ್ಕಾಗಿ ಈ ಸಭೆಯಲ್ಲಿ ರಿಲಿಜಸ್ ಎಂಡೋಮೆಂಟಿನ ಆಕ್ಟು ಪಾಸಾದ ತಕ್ಷಣ ಈ ಕೆಲಸ ಗಳನ್ನೆಲ್ಲಾ ಮಾಡಲು ಅನುಕೂಲವಾಗುತ್ತದೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ.—ಸೆಕ್ಯುಲರ್ ಸ್ಟೇಟಿನಲ್ಲೇ ದೇವಸ್ಥಾನಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದಿರಿ. ಹಿಂದೂಸ್ಥಾನ ಸರಕಾರದವರು ಪ್ರಾಚೀನ ಕಾಲದಿಂದ ಬಂದಿರತಕ್ಕ ಗುಡಿ ಗೋಪುರಗಳನ್ನು ರಕ್ಷಣೆಮಾಡುತ್ತೇವೆ ಎಂದು ಹೇಳುತ್ತಿರುವುದರಿಂದ ಅವರಿಗೆ ಇದನ್ನು ಬಿಡು ವುದು ಸರಿಯಲ್ಲವೇ ? ಈಗಿರತಕ್ಕ ದೇವಸ್ಥಾನಗಳ ಬಗ್ಗೆ ರಿಪೇರಿ ಮಾಡಲು ಏನಾದರೂ ಅಂತಹ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸೆಕ್ಯುಲರ್ ಸ್ಟೇಟಿನಲ್ಲಿ ದೇವಸ್ಥಾನಗಳನ್ನು ಕಟ್ಟುವುದಿಲ್ಲ ಎಂದು ಹೇಳಿಲ್ಲ. ಇವುಗಳಿಗಾಗಿ ಹೆಚ್ಚಿಗೆ ಫಂಡ್ಸುಗಳನ್ನು ಪ್ರೊವೈಡ್ ಮಾಡುವುದಕ್ಕಾಗಲಿಲ್ಲ ಮತ್ತು ಅವು ಗಳಿಂದ ಬರುವ ಉತ್ಪತ್ತಿ ಸಾಕಾಗುತ್ತಿಲ್ಲ. ತಾವು ಹೇಳುವುದು ಭಾರತ ಸರಕಾರದ ಆರ್ಕಿಯಾಲಾಜಿ ಕಲ್ ಇಲಾಖೆಯವರು ನ್ಯಾಷನಲ್ ಮಾನ್ಯುಮೆಂಟ್ಸು ಎಂದು ಅವುಗಳನ್ನು ಕಾಪಾಡಲು ಸಹಾಯ ಮಾಡುತ್ತಾರೆ. ಅಂತಹ ಸಂಸ್ಥೆಗಳು ನಮ್ಮ ಸಂಸ್ಥಾನದಲ್ಲಿ ನೂರಾರು ಇವೆ. ಅವರು ದೇವಸ್ಥಾನಗಳು ಬಿದ್ದು ಹೋದರೆ ಕಟ್ಟಿಕೊಡುತ್ತಾರೆಯೇ ವಿನಾ ಅಲ್ಲಿ ಪೂಜೆ ಮಾಡಿಸುವುದಕ್ಕಾಗಿ ಯಾವ ದುಡ್ಡನ್ನೂ ಕೊಡುತ್ತಿಲ್ಲ.

ಶ್ರೀ ಜಿ. ಮಾದಯ್ಯಗೌಡ.—ದೇವಸ್ಥಾನಗಳನ್ನು ರಿಪೇರಿ ಮಾಡುವುದಕ್ಕೆ ಇರುವ ಏಜನ್ಸಿ ಯಾವುದು ?

ಶ್ರೀ ಎಂ. ವಿ. ಕೃಷ್ಣಪ್ಪ —ಈಗ ಪಿ. ಡಬ್ಲ್ಯು. ಡಿ. ಯವರೇ ಮಾಡುತ್ತಿದ್ದಾರೆ. ಮುಂದೆ ಇದಕ್ಕಾಗಿಯೇ ನಮ್ಮ ಇಲಾಖೆ ಮೂಲಕ ಪ್ರತ್ಯೇಕವಾದ ಒಂದು ಸೆಲ್ಲನ್ನು ಮಾಡೋಣ ಎಂದಿದೆ. ಲಕ್ಷಾಂತರ ರೂಪಾಯಿಗಳ ಉತ್ಪತ್ತಿ ಬರುತ್ತಿರುವುದರಿಂದ ಪ್ರತ್ಯೇಕವಾದ ಇಂಜನಿಯರಿಂಗು ಸೆಲ್ ಮಾಡಬೇಕೆನ್ನುವ ಯೋಚನೆಯೂ ಇದೆ.

ಶ್ರೀ ಅವೆರೆಡ್ಡಿ.—ಜನರಲ್ ಮುಜರಾಯಿ ಫಂಡು ಎಷ್ಟಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮಗೆ ಈಗ ನುಮಾರು ನಾಲ್ಕು ಲಕ್ಷದವರೆಗೂ ಬರುತ್ತಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಎರಡು ಮೇಜರ್ ಇನ್ಸ್‌ಟಿಟ್ಯೂಷನ್ನುಗಳು ಎಂದರೆ ತಿರುಪತಿ ಮತ್ತು ಕಾಶಿ ಇಲ್ಲಿಗೆ ಹಣ ಖರ್ಚು ಮಾಡುತ್ತಿದ್ದೇವೆಂದು ಹೇಳಿದಿರಿ. ಈಗ ಕಾಶಿಯಲ್ಲಿ ಕಟ್ಟಿರುವ ಸೋಪಾನ ಬಿದ್ದು ಹೋಗಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.— ಬಂದಿದೆ, ಅದನ್ನು ರಿಪೇರಿ ಮಾಡುವುದಕ್ಕೆ ಹಣವನ್ನೂ ಮಂಜೂರು ಮಾಡಿ ಅದನ್ನು ಈಗ ಯು. ಪಿ. ಸರಕಾರದ ಮೂಲಕ ಮಾಡಿಸಲು ಏರ್ಪಾಡು ಮಾಡುತ್ತಿದ್ದೇವೆ.

Minor Irrigation Tanks Investigated in Mundargi and Gadag Taluks

*Q.—939. Sri C. S. HULKOTI (Mundargi).—

Will the Government be pleased to state :—

(*a*) whether it has come to their notice that there is great natural scope for having Minor irrigation tanks along both sides of Koppal range of hills in both the Taluks of Mundargi and Gadag in the District of Dharwar ;

(*b*) the number and names of minor irrigation tanks that have been investigated in that area ;

(*c*) for how many investigated tanks plans and estimates have been prepared and kept ready ;

(*d*) what is the extent of the area to be covered by irrigation (the estimate amount and the return of each such investigated tank in the said two taluks may be furnished) ;

(*e*) how many more irrigation tanks are still to be investigated and plans and estimates for them are to be prepared ;

(*f*) whether they intend to take any steps to sanction and make provision for funds for taking up the construction of the said tanks in view of the fact that the said area is the most undeveloped area ?

A.—Sri ALUR HANUMANTHAPPA (Deputy Minister for minor Irrigation).—

(*a*) The matter is under examination and data is being collected to evaluate the valley-wise water potential for irrigation purpose.

(*b*) Fifteen. For details *vide* statement appended.

(*c*) and (*d*) 7 projects. For details *vide* statement appended.

(*e*) Eight Irrigation works.

(*f*) Yes ; This will be examined.